# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

**ಸಾರ್ವಜನಿಕ ಸಂಪರ್ಕ ವಿಭಾಗ, ನರಸಿಂಹರಾಜ ಚೌಕ, ಬೆಂಗಳೂರು-560 002**

**ಪತ್ರಿಕಾ ಪ್ರಕಟಣೆ** **ದಿನಾಂಕ: 13.12.2019**

## ಧೂಮಪಾನ ಮುಕ್ತ ಬೆಂಗಳೂರನ್ನಾಗಿಸಲು ಸಾರ್ವಜನಿಕರಲ್ಲಿ ಜಾಗೃತಿ: ಮಾನ್ಯ ಆಯುಕ್ತರು

ಬಿಬಿಎಂಪಿ ವ್ಯಾಪ್ತಿಯಲ್ಲಿ ತಂಬಾಕು ನಿಯಂತ್ರಣ ಮಾಡಲು ಈಗಾಗಲೇ ಹಲವು ಕ್ರಮಗಳನ್ನು ಕೈಗೊಳ್ಳಲಾಗಿದ್ದು, ತಂಬಾಕು ನಿಯಂತ್ರಣ ಕಾನೂನುಗಳನ್ನು ಪರಿಣಾಮಕಾರಿಯಾಗಿ ಜಾರಿಗೊಳಿಸುವುದಾಗಿ ಪಾಲಿಕೆ ಆಯುಕ್ತರು ತಿಳಿಸಿರುತ್ತಾರೆ.

ಸಾಂಕ್ರಾಮಿಕವಲ್ಲದ ರೋಗಗಳಿಂದ(Noncommunicable diesease-NCDs) ಜೀವಗಳನ್ನು ಉಳಿಸುವ ನಿಟ್ಟಿನಲ್ಲಿ ವಿಶ್ವ ಆರೋಗ್ಯ ಸಂಸ್ಥೆ ಹಾಗೂ ಬ್ಲೂಮ್‌ಬರ್ಗ್ ಸಹಯೋಗದಲ್ಲಿ ಜಾಗತಿಕ ಮಟ್ಟದ 54 ನಗರಗಳಲ್ಲಿ ತಂಬಾಕು ನಿಯಂತ್ರಣಗೊಳಿಸುವ ಬಗ್ಗೆ ಸಾರ್ವಜನಿಕರಲ್ಲಿ ಜಾಗೃತಿ ಮೂಡಿಸುವುದು, ಸಾರ್ವಜನಿಕ ಸ್ಥಳಗಳಲ್ಲಿ ಧೂಮಪಾನ ಸೇವನೆ ಮಾಡುವವರಿಗೆ ಪೋಲೀಸ್ ಸಹಯೋಗದಲ್ಲಿ ದಂಡ ವಿಧಿಸುವುದು, ಧೂಮಪಾನ ನಿಷೇಧಿಸಿದೆ ಎಂಬ ನಾಮಫಲಕಗಳನ್ನು ಅಳವಡಿಸುವುದು, ಬೀದಿ ನಾಟಕಗಳ ಮೂಲಕ ಜಾಗೃತಿ ಮೂಡಿಸಲಾಗುತ್ತಿದೆ. ಇದೀಗ ಜಾಗತಿಕ ಮಟ್ಟದ 70 ನಗರಗಳಲ್ಲಿ ತಂಬಾಕು ನಿಯಂತ್ರಣದ ಬಗ್ಗೆ ಜಾಗೃತಿ ಮೂಡಿಸಲು ಸೂಕ್ತ ಕ್ರಮವಹಿಸಲಾಗುತ್ತಿದೆ.

ಪಾಲಿಕೆ ವ್ಯಾಪ್ತಿಯಲ್ಲಿ ಧೂಮಪಾನ ನಿಷೇಧಿಸಲು ಈಗಾಗಲೇ ಹಲವಾರು ಸೂಕ್ತ ಕ್ರಮಗಳನ್ನು ಕೈಗೊಳ್ಳಲಾಗಿರುತ್ತದೆ. ಈ ಸಂಬಂಧ ಇತ್ತೀಚೆಗೆ ಇಂಡೋನೇಷ್ಯಾದಲ್ಲಿ ನಡೆದ ತಂಬಾಕು ನಿಯಂತ್ರಣ ಮತ್ತು NCDs ನಿಯಂತ್ರಣ ಕುರಿತ ಏಷ್ಯಾ ಪೆಸಿಫಿಕ್ ನಗರಗಳ ಸಮಾವೇಶದಲ್ಲಿ ಬೆಂಗಳೂರು ನಗರಕ್ಕೆ-2019ರಲ್ಲಿ ಉತ್ತಮ ಸಾಧನೆ ನಗರಿ ಎಂಬ ಪ್ರಶಸ್ತಿ ಕೂಡ ಲಭಿಸಿರುತ್ತದೆ.

2017-18ರಲ್ಲಿ ಸಾರ್ವಜನಿಕ ಸ್ಥಳಗಳಲ್ಲಿ ಶೇ.21ರಷ್ಟು "ಧೂಮಪಾನ ನಿಷೇಧಿಸಿದೆ" ಎಂಬ ನಾಮಫಲಕಗಳನ್ನು ಅಳವಡಿಸಲಾಗಿದೆ. ಇದೀಗ ಶೇ.49.8ರಷ್ಟು ಅಳವಡಿಸಲಾಗಿರುತ್ತದೆ. ಜಾಗತಿಕ ಮಟ್ಟದ 70 ನಗರಗಳ ವಿವರಗಳನ್ನು https://partnershipforhealthycities.bloomberg.org/cities/ ಈ ಲಿಂಕ್‌ನಲ್ಲಿ ನೋಡಬಹುದಾಗಿರುತ್ತದೆ.

**ಹೆಚ್ಚಿನ ಮಾಹಿತಿಗಾಗಿ ಸದರಿ ಮಾಹಿತಿಯ ಪತ್ರಿಕಾ ಪ್ರಕಟಣೆಯ ಪ್ರತಿಯನ್ನು ಲಗತ್ತಿಸಲಾಗಿರುತ್ತದೆ.**

**ಈ ವಿಷಯವನ್ನು ತಮ್ಮ ಮಾಧ್ಯಮದಲ್ಲಿ ಪ್ರಕಟಿಸಲು ಕೋರಿದೆ.**

**ಸಾರ್ವಜನಿಕ ಸಂಪರ್ಕಾಧಿಕಾರಿ**

**ಪತ್ರಿಕೆ ಪ್ರಕಟಣೆಗಾಗಿ**

**ನಗರಗಳ ಜಾಗತಿಕ ಜಾಲದ ಬೆಂಬಲದೊಂದಿಗೆ ಧೂಮಪಾನ ರಹಿತ ಕಾನೂನುಗಳ ಕಠಿಣ ಜಾರಿಗೆ ಬಿಬಿಎಂಪಿ ಮುಖ್ಯಸ್ಥರ ಘೋಷಣೆ**

***ಸಾರ್ವಜನಿಕ ಆರೋಗ್ಯ ಸುಧಾರಣೆ ನಿಟ್ಟಿನಲ್ಲಿ ಸಾಬೀತಾದ ಕಾರ್ಯತಂತ್ರಗಳ ಮೂಲಕ ವಿಶ್ವದಾದ್ಯಂತ 300 ಮಿಲಿಯನ್ ಮಂದಿ ರಕ್ಷಣೆ***

**(ಬೆಂಗಳೂರು 13 ಶುಕ್ರವಾರ ಡಿಸೆಂಬರ್ 2019**) – ಬೃಹತ್ ಬೆಂಗಳೂರು ನಗರ ಮಹಾನಗರ ಪಾಲಿಕೆ ಆಯುಕ್ತರಾದ ಶ್ರೀ ಬಿ. ಎಚ್. ಅನಿಲ್ ಕುಮಾರ್ ಅವರು ಇಂದು ಮುಂದಿನ ದಿನಗಳಲ್ಲಿ ತಂಬಾಕು ನಿಯಂತ್ರಣ ಕಾನೂನುಗಳನ್ನು ಇನ್ನಷ್ಟು ಕಠಿಣ ರೀತಿಯಲ್ಲಿ ಬೆಂಗಳೂರು ನಗರದಲ್ಲಿ ಜಾರಿಗೊಳಿಸುವುದಾಗಿ ಘೋಷಿಸಿದ್ದಾರೆ. ಕ್ಯಾನ್ಸರ್ ಅಥವಾ ಮಧುಮೇಹ ಮತ್ತಿತರ ಸಾಂಕ್ರಮಿಕವಲ್ಲದ ರೋಗಗಳು(ಎನ್ ಸಿ ಡಿಎಸ್)ಗಳಿಂದ ಜೀವಗಳನ್ನು ಉಳಿಸುವ ನಿಟ್ಟಿನಲ್ಲಿ ಜಾಗತಿಕ ಮಟ್ಟದಲ್ಲಿ 70 ನಗರಗಳಲ್ಲಿ ಕೈಗೊಂಡಿರುವ ಆರೋಗ್ಯ ನಗರ ನಿರ್ಮಾಣ ಪಾಲುದಾರಿಕೆಯಲ್ಲಿ ಈ ಕ್ರಮವನ್ನು ಕೈಗೊಳ್ಳಲು ಉದ್ದೇಶಿಸಲಾಗಿದೆ. ಜಗತ್ತಿನಾದ್ಯಂತ ಆರೋಗ್ಯ ನಗರಗಳ ಪಾಲುದಾರಿಕೆ 54 ನಗರಗಳಿಂದ 70 ನಗರಗಳಿಗೆ ವಿಸ್ತರಣೆಗೊಂಡಿದ್ದು, ಅದರ ಒಟ್ಟಾರೆ ಜನಸಂಖ್ಯೆ 300 ಮಿಲಿಯನ್ ಆಗಿದೆ.

ಅಲ್ಲದೆ ಅನಿಲ್ ಕುಮಾರ್ ಅವರು, ಹಾಲಿ ತಂಬಾಕು ನಿಯಂತ್ರಣ ಕಾನೂನುಗಳ ಪಾಲನೆ ಬಗ್ಗೆ ಪಾಲಿಕೆ ಸಾರ್ವಜನಿಕರಲ್ಲಿ ಜಾಗೃತಿ ಮೂಡಿಸುತ್ತಿರುವುದಲ್ಲದೆ, ಸಂಬಂಧಿಸಿದವರ ಜೊತೆಗೂಡಿ ಸಾಮಾಜಿಕ ಮಾಧ್ಯಮ, ರೇಡಿಯೋ ಷೋ ಮತ್ತು ಆಟೋ ರಿಕ್ಷಾಗಳ ಮೇಲೆ ಸಂದೇಶಗಳನ್ನು ಪಸರಿಸುತ್ತಾ ಅಭಿಯಾನವನ್ನು ಕೈಗೊಂಡಿದೆ ಎಂದರು. "ಪಾಲಿಕೆ ಕೈಗೊಂಡಿರುವ ಅಂತಹ ಕ್ರಮಗಳಿಂದಾಗಿ ಇತ್ತೀಚೆಗೆ ಇಂಡೋನೇಷ್ಯಾದಲ್ಲಿ ನಡೆದ ತಂಬಾಕು ನಿಯಂತ್ರಣ ಮತ್ತು ಎನ್ ಸಿ ಡಿಎಸ್ ನಿಯಂತ್ರಿಣ ಕುರಿತ ಏಷ್ಯಾ ಪೆಸಿಫಿಕ್ ನಗರಗಳ ಸಮಾವೇಶದಲ್ಲಿ ಬೆಂಗಳೂರು ನಗರಕ್ಕೆ 2019ರ ಉತ್ತಮ ಸಾಧನೆ ನಗರಿ ಪ್ರಶಸ್ತಿ ಲಭಿಸಿದೆ. ಬೆಂಗಳೂರು ನಗರವನ್ನು ಧೂಮಪಾನರಹಿತಗೊಳಿಸಲು ಈಗಾಗಲೇ ಸಾಕಷ್ಟು ಜಾರಿ ಕ್ರಮಗಳನ್ನು ಕೈಗೊಳ್ಳಲಾಗಿದೆ. ಇನ್ನೂ ಹೆಚ್ಚಿನ ಫಲಿತಾಂಶಗಳನ್ನು ಪಡೆಯಲು ಎರಡನೇ ಹಂತದ ಧೂಮಪಾನರಹಿತ ಬೆಂಗಳೂರು - ಸ್ಮೋಕ್ ಫ್ರಿ ಬೆಂಗಳೂರು ಯೋಜನೆಯಲ್ಲಿ ಇನ್ನೂ ಹೆಚ್ಚಿನ ಪರಿಣಾಮಕಾರಿ ಕ್ರಮಗಳನ್ನು ಕೈಗೊಳ್ಳಲಾಗುವುದು ಎಂದರು.

"ಸಾರ್ವಜನಿಕ ಆರೋಗ್ಯ ಸುಧಾರಣೆಗೆ ದಿಟ್ಟ ಕ್ರಮ ಅಗತ್ಯ" ಎಂದು ಬಿಬಿಎಂಪಿ ಮುಖ್ಯಸ್ಥರು ಹೇಳಿದ್ದು, ಆರೋಗ್ಯ ನಗರಗಳ ನಿರ್ಮಾಣ ಪಾಲುದಾರಿಕೆಗೆ ತಮ್ಮ ಬದ್ಧತೆಯನ್ನು ಪುನರುಚ್ಚರಿಸಿದರು. 2017-18ನೇ ಸಾಲಿನಲ್ಲಿ ಸಾರ್ವಜನಿಕ ಸ್ಥಳಗಳಲ್ಲಿ "ಧೂಮಪಾನ ನಿಷೇಧಿಸಿದೆ" ಎಂಬ ಫಲಕಗಳ ಅಳವಡಿಕೆ ಬೆಂಗಳೂರು ನಗರದಲ್ಲಿ ಶೇ.21ರಷ್ಟು ಹೆಚ್ಚಾಗಿದೆ. "ಬೆಂಗಳೂರು ನಿವಾಸಿಗಳ ಜೀವನವನ್ನು ಸುಗಮಗೊಳಿಸುವ ನಿಟ್ಟಿನಲ್ಲಿ ಹಲವು ಸಂಘ ಸಂಸ್ಥೆಗಳು ಒಗ್ಗೂಡಿ ಕೆಲಸ ಮಾಡುತ್ತಿರುವುದು ನಮಗೆ ಹೆಮ್ಮೆ ಎನಿಸುತ್ತದೆ, ಆರೋಗ್ಯ ನಗರಿ ಪಾಲುದಾರಿಕೆ ಮೂಲಕ ನಮ್ಮ ಪ್ರಯತ್ನಗಳು ಇನ್ನೂ ಹೆಚ್ಚಿನ ಪರಿಣಾಮಗಳನ್ನು ಬೀರಲಿವೆ. ಪರಿಣಾಮಕಾರಿ ನಗರ ಆರೋಗ್ಯ ವ್ಯವಸ್ಥೆ ರೂಪಿಸುವ ನಿಟ್ಟಿನಲ್ಲಿ ನಾವು ಜಾಗತಿಕ ನೀಲನಕ್ಷೆಯನ್ನು ಅನುಷ್ಠಾನಗೊಳಿಸುತ್ತೇವೆ" ಎಂದು ಹೇಳಿದರು.

"ಬೆಂಗಳೂರು ನಗರಕ್ಕೆ ಶುಭಾಶಯಗಳು ಆರೋಗ್ಯಕರ ನಗರ ನಿರ್ಮಾಣ ನಿಟ್ಟಿನಲ್ಲಿ ಸಾಗಿದ್ದೀರಿ, ಬಹುತೇಕ ಜಗತ್ತು ಇಂದು ನಗರ ಪ್ರದೇಶಗಳಲ್ಲಿ ನೆಲೆಸಿದೆ ಮತ್ತು ನಗರಗಳು ಅರ್ಥಪೂರ್ಣ ನೀತಿಗಳನ್ನು ಕ್ಷಿಪ್ರವಾಗಿ ಜಾರಿಗೊಳಿಸುತ್ತಿವೆ" ಎಂದು ಬ್ಲೂಮ್ ಬರ್ಗ್ ಫಲಾಂತ್ರಪೀಸ್ ನಲ್ಲಿ ಸಾರ್ವಜನಿಕ ಆರೋಗ್ಯ ಕಾರ್ಯಕ್ರಮ ಮುನ್ನೆಡೆಸುತ್ತಿರುವ ಕೆಲ್ಲಿ ಹೆನ್ನಿಂಗ್ ಹೇಳಿದ್ದಾರೆ. "ಆರೋಗ್ಯ ನಗರ ಪಾಲುದಾರಿಕೆಯಲ್ಲಿ ಆ ಕ್ರಿಯೆಗೆ ಬದ್ಧವಾಗಿರುವ ಮೇಯರ್ ಗಳನ್ನು ಒಂದುಗೂಡಿಸಲಿದೆ. ಸಹಭಾಗಿತ್ವ ಇದೀಗ 70 ನಗರಗಳಿಗೆ ವಿಸ್ತರಣೆಗೊಂಡಿದೆ. ಸಾಂಕ್ರಾಮಿಕವಲ್ಲದ ರೋಗಗಳು ಮತ್ತು ಗಾಯಗಳಿಂದ ಮಿಲಿಯನ್ ಗಟ್ಟಲೆ

ಜನರನ್ನು ರಕ್ಷಿಸಲಾಗುತ್ತಿದೆ ಮತ್ತು ಮುಂಬರುವ ಜನಾಂಗದ ಆರೋಗ್ಯವನ್ನು ರಕ್ಷಿಸಲಾಗುತ್ತದೆ" ಎಂದರು.

ಬೆಂಗಳೂರು ನಗರದಲ್ಲಿ ಮಾರಾಟ ಸ್ಥಳ(ಪೆಟ್ಟಿಗೆ ಅಂಗಡಿಗಳು ಮತ್ತು ಇತರೆ ವಾಣಿಜ್ಯ ಮುಂಗಟ್ಟುಗಳು)ಗಳಲ್ಲಿ ಸಿಗರೇಟು ಮತ್ತು ಇತರೆ ತಂಬಾಕು ಪದಾರ್ಥಗಳ ಕಾಯ್ದೆ - 2003 ಅಥವಾ ಕೋಟ್ಪಾ ಉಲ್ಲಂಘನೆಗಳು ಅತಿ ಹೆಚ್ಚು ಪ್ರಮಾಣದಲ್ಲಿ ನಡೆಯುತ್ತಿವೆ. ಶೇ.70.5ರಷ್ಟು ಸಾರ್ವಜನಿಕ ಸ್ಥಳಗಳಲ್ಲಿ ಧೂಮಪಾನ ನಿಷೇಧವಿದ್ದರೂ ಅಲ್ಲಿ ತಂಬಾಕು ಪದಾರ್ಥಗಳ ಮಾರಾಟ ಎಗ್ಗಿಲ್ಲದೆ ಸಾಗಿದೆ. ಧೂಮಪಾನ ನಿಷೇಧ ಫಲಕಗಳು ಶೇ.49.8ರಷ್ಟು ಇದ್ದರೂ ಸಹ ಸುಸ್ಥಿರ ಜಾರಿ ಮತ್ತು ಜಾಗೃತಿ ಆಂದೋಲನಗಳನ್ನು ಕೈಗೊಳ್ಳಲಾಗುತ್ತಿದೆ.

ಎನ್ ಸಿ ಡಿಎಸ್ ಮತ್ತು ಗಾಯಗಳು ಜಾಗತಿಕಮಟ್ಟದಲ್ಲಿ ಸಾವನ್ನಪ್ಪುವ 10ರಲ್ಲಿ 8 ಸಾವಿಗೆ ಕಾರಣವಾಗಿದೆ. ಎನ್ ಸಿ ಡಿ ನೀತಿಗಳ ಪ್ರಮುಖ ಅನುಷ್ಠಾನದಲ್ಲಿ ಪ್ರತಿ ವ್ಯಕ್ತಿಗೆ ಹೆಚ್ಚುವರಿ ವೆಚ್ಚ ತಗಲುತ್ತಿದೆ. ವಿಶೇಷವಾಗಿ ಮಧ್ಯಮ ಆದಾಯದ ನಗರಿಗಳಲ್ಲಿ 2030ರ ವೇಳೆಗೆ 1.27 ಡಾಲರ್ ವೆಚ್ಚ ತಗುಲಲಿದೆ. ಬಹುತೇಕ ದೇಶಗಳಲ್ಲಿ ರಸ್ತೆ ಗಾಯಗಳ ಪ್ರಮಾಣ ಒಟ್ಟು ದೇಶೀಯ ಉತ್ಪನ್ನಕ್ಕಿಂತ ಶೇ.3ರಷ್ಟು ತಲುಪಿದೆ. ಈ ಪಾಲುದಾರಿಕೆ ಮೂಲಕ ಎನ್ ಸಿ ಡಿಎಸ್ ಮತ್ತು ಗಾಯಗಳಿಂದ ಆಗುವ ಅಪಾಯಗಳನ್ನು ಹತ್ತಿಕ್ಕಲು 14 ಬಗೆಯ ಮಧ್ಯಪ್ರವೇಶ ಮಾಡುತ್ತಿದ್ದು, ಅವುಗಳಲ್ಲಿ ಧೂಮಪಾನರಹಿತ ಕಾನೂನುಗಳ ಮೂಲಕ ಜನರ ರಕ್ಷಣೆ, ಸೆಕೆಂಡ್ ಹ್ಯಾಂಡ್ ಸ್ಮೋಕ್ ಮೂಲಕ ರಕ್ಷಣೆ, ಹೆಚ್ಚಿನ ಸಕ್ಕರೆ ಅಂಶವಿರುವ ಪಾನಿಯ ಸೇವನೆ ನಿರ್ಬಂಧ, ಜಂಕ್ ಫುಡ್ ಜಾಹಿರಾತು ನಿಷೇಧ ಅಥವಾ ನಗರಗಳಲ್ಲಿ ಸುರಕ್ಷಿತ ಸೈಕ್ಲಿಂಗ್ ಮಾರ್ಗಗಳ ಸೃಷ್ಟಿ ಮತ್ತಿತರ ಕ್ರಮಗಳನ್ನು ಕೈಗೊಳ್ಳಲಾಗುತ್ತಿದೆ.

ಬ್ಲೂಮ್ ಬರ್ಗ್ ಫಿಲಾಂತ್ರಫೀಸ್ ಜೊತೆಗೂಡಿ ವಿಶ್ವ ಆರೋಗ್ಯ ಸಂಸ್ಥೆ(ಡಬ್ಲ್ಯೂ ಎಚ್‌ಒ) ಮತ್ತು ವೈಟಲ್ ಸ್ಟ್ರಾಟಜೀಸ್ ಈ ಆರೋಗ್ಯ ನಗರಿ ಪಾಲುದಾರಿಕೆಯನ್ನು ಬೆಂಬಲಿಸಿವೆ. ಇದು ಎನ್ ಸಿ ಡಿ ಮತ್ತು ಗಾಯಗಳನ್ನು ನಿಯಂತ್ರಿಸುವ ನಿಟ್ಟಿನಲ್ಲಿ ಸಾಕ್ಷ್ಯ ಆಧರಿಸಿದ ಪರಿಣಾಮಕಾರಿ ಕ್ರಮಗಳನ್ನು ಅನುಷ್ಠಾನಗೊಳಿಸುತ್ತಿದೆ. ಪಾಲುದಾರಿಕೆ ಹೊಂದಿರುವ ನಗರಗಳು ಆರೋಗ್ಯಕರ ಮತ್ತು ಸುರಕ್ಷಿತ ವಾತಾವರಣ ನಿರ್ಮಾಣ ನಿಟ್ಟಿನಿಲ್ಲಿ ಸಾಕಷ್ಟು ಪ್ರಗತಿ ಸಾಧಿಸಿವೆ. ಉದಾಹರಣೆಗೆ ಇಕ್ವೆಡಾರ್ ನ ಕ್ವಿಟೋದಲ್ಲಿ ಜಂಕ್ ಫುಡ್ ಬದಲಿಗೆ ಶೇ.50ರಷ್ಟು ಆರೋಗ್ಯಕರ ಆಯ್ಕೆಗಳನ್ನು ಸಾರ್ವಜನಿಕ ಶಾಲಾ ವಿದ್ಯಾರ್ಥಿಗಳಿಗೆ ನೀಡಲಾಗುತ್ತಿದ್ದು, ಅದು ಮುಂದಿನ ವರ್ಷ ಶೇ. 100ಕ್ಕೆ ವಿಸ್ತರಣೆಯಾಗಲಿದೆ. ಘಾನಾದ ಅಕ್ರಾದಲ್ಲಿ ಗಂಭೀರ ಮೂಲಸೌಕರ್ಯ ಸರಣಿ ಸವಾಲುಗಳು ಇದ್ದರೂ ರಸ್ತೆ ಅಪಘಾತಗಳಿಂದ ನಗರದಲ್ಲಿ ಆಗುತ್ತಿದ್ದ ಗಾಯಗಳ ಪ್ರಮಾಣ ಸುಮಾರು ಶೇ.35ರಷ್ಟು ತಗ್ಗಿದೆ.

ವಿಶ್ವದಾದ್ಯಂತ ನಗರಗಳು ಅತ್ಯಂತ ವೇಗವಾಗಿ ಬೆಳೆಯುತ್ತಿವೆ ಮತ್ತು ಅವುಗಳಿಂದ ಕ್ರಿಯೆಗಳನ್ನು ಕೈಗೊಳ್ಳಲು ಸಾಕಷ್ಟು ಅವಕಾಶಗಳು ದೊರೆಯುತ್ತಿವೆ ಎಂದು ವಿಶ್ವ ಆರೋಗ್ಯ ಸಂಸ್ಥೆಯಲ್ಲಿ ಆರೋಗ್ಯಕರ ಜನಸಂಖ್ಯೆ/ಸಾಮೂಹಿಕ ಆರೋಗ್ಯ ವ್ಯಾಪ್ತಿ ವಲಯದ ಮಹಾ ನಿರ್ದೇಶಕ ಡಾ. ನಾಕೊ ಯಮಮೊಟೊ ಹೇಳಿದ್ದಾರೆ. "ಆರೋಗ್ಯಕರ ನಗರಿಗಳ ಪಾಲುದಾರಿಕೆ ಹೇಗೆ ಎನ್ ಸಿ ಡಿಎಸ್ ಮತ್ತು ಗಾಯಗಳನ್ನು ತಡೆಯುವ ನಿಟ್ಟಿನಲ್ಲಿ ಪ್ರಮುಖ ಪಾತ್ರ ವಹಿಸುತ್ತವೆ ಎಂಬುದನ್ನು ಈಗಾಗಲೇ ನಿರೂಪಿಸಿವೆ"

ವೈಟಲ್ ಸ್ಟಾಟಜೀಸ್ ನ ಸಿಇಒ ಮತ್ತು ಅಧ್ಯಕ್ಷ ಜೋಸ್ ಲೋಯಿಸ್ ಕಾಸ್ಟ್ರೊ, "ವಿಶ್ವ ಆರೋಗ್ಯ ಸಂಸ್ಥೆ ಮತ್ತು ಬ್ಲೂಮ್ ಬರ್ಗ್ ಫಿಲಾಂತ್ರಪೀಸ್ ಮೂಲಕ ನಾವು ನಗರ ಸಾರ್ವಜನಿಕ ಆರೋಗ್ಯ ರಕ್ಷಣೆ ನಿಟ್ಟನಲ್ಲಿ ಮಹತ್ವದ ಕಾರ್ಯಕ್ರಮಗಳನ್ನು ಜಾರಿಗೊಳಿಸುತ್ತಿದ್ದೇವೆ. ನಮ್ಮ ತಂಡ ಅತ್ಯಂತ ಕ್ರಿಯಾಶೀಲವಾಗಿ ಪಾಲುದಾರಿಕೆ ಹೊಂದಿರುವ ನಗರಗಳ ಜೊತೆ ಕೆಲಸ ಮಾಡಿ, ಸಾಂಕ್ರಾಮಿಕ ವಲ್ಲದ ರೋಗಗಳು ಮತ್ತು ಗಾಯಗಳನ್ನು ನಿಯಂತ್ರಿಸುವ ನಿಟ್ಟಿನಲ್ಲಿ ಅಗತ್ಯ ನೀತಿಗಳನ್ನು ರೂಪಿಸುವುದು ಮತ್ತು ಬೆಂಬಲಿಸುವುದ ಜೊತೆಗೆ ಸಹಾಯವನ್ನು ನೀಡುತ್ತಿದೆ. ಆ ಮೂಲಕ ನಾವು ಜಗತ್ತಿನಾದ್ಯಂತ ಆರೋಗ್ಯ ವ್ಯವಸ್ಥೆ ಬಲವರ್ಧನೆಯ ದೂರದೃಷ್ಟಿಯನ್ನು ಸಾಧಿಸಲು ಕಾರ್ಯೋನ್ಮುಖವಾಗಿದ್ದೇವೆ ಎಂದರು.

ಮಾಧ್ಯಮ ಸಂಪರ್ಕಕ್ಕಾಗಿ
ಅಮಿತ್ ಕಾರ್ನಿಕ್ - 9880432198
ಪವನ್ ಸಿಂಹ - 9035135823
smokefreebengaluru@gmail.com